| | | |
|---|---|---|
| ಸಾಕ್ಷಿಯ ಹೆಸರು | : | ಪುನೀತ್ ವಿ ಹೆಗಡೆ |
| ತಂದೆ ಹೆಸರು | : | ವಿಘ್ನೇಶ್ವರ ಹೆಗಡೆ |
| ವಯಸ್ಸು | : | **25** ವರ್ಷ |
| ಉದ್ಯೋಗ | : | ಲೀಗಲ್ ಮ್ಯಾನೇಜರ್ |
| ವಾಸ | : | ಹುಬ್ಬಳ್ಳಿ |

**ದಿನಾಂಕಃ25.07.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ.

ಆಥರೈಸೇಷನ್ ಲೆಟರನ್ನು ನಿಆರ್–1 ಎಂದು, ಪಾಲಸಿ ಪ್ರತಿಯನ್ನು ನಿಪಿ ಆರ್–2 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ವೈ ಆರ್ ಕೆ ವಕೀಲರಿಂದಃ**

ನಮ್ಮ ಕಂಪನಿಯಿಂದ ಈ ಅಪಘಾತ ಕುರಿತು ಪ್ರತ್ಯೇಕ ತನಿಖೆ ಮಾಡಿಸಿರುವುದಿಲ್ಲ. ಪಾಲಿಸಿ ಮತ್ತು ಆರ್ ಸಿ ಯಲ್ಲಿ ಸೀಟಿಂಗ್ ಕೆಪಾಸಿಟಿ 2 ಇದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ಇಬ್ಬರು ವಾಹನದಲ್ಲಿಹೋಗುತ್ತಿದ್ದರು ಎಂದರೆ ಸರಿ. ಅಬ್ಬಿನ ಹೊಳೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಪ್ರಕರಣವನ್ನು ತಪ್ಪಾಗಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಮೋಟರ್ ಚಾಲಕ ರಮೇಶ್ ತಪ್ಪಿನಿಂದ ಅಪಘಾತವಾಗಿದೆ ಎಂದು ಪ್ರ ವ ವ ರದಿಯಲ್ಲಿ ನಮೂದು ಇದೆ ಎಂದರೆ ಸಾಕ್ಷಿ ತಪ್ಪಾಗಿ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಹಿಂಬದಿ ಸವಾರರಿಗೆ ಪ್ರಿಮಿಯಂ ಕವರ್ ಆಗುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ತಿಪ್ಪೇಸ್ವಾಮಿ ಅಪಘಾತದಿಂದ ಆದ ಗಾಯಗಳಿಂದ ತೀರಿಕೊಂಡಿದ್ದರೂ ಸಹ

ವಯೋ ಸಹಜ ಮರಣ ಹೊಂದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತರ ವಾರಸುದಾರರಿಗೆ ಪರಿಹಾರ ನೀಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು